# ವಲಸಿಗರ ಬಗ್ಗೆ ಸುಪ್ರೀಂ ಕೋರ್ಟು ಸ್ವಯಂಪ್ರೇರಿತವಾಗಿ ದಾಖಲಿಸಿದ ಪ್ರಕರಣದ ಮೇಲಿನ ಆದೇಶಗಳ ಕುರಿತ ಟಿಪ್ಪಣಿ

ವಲಸೆ ಕಾರ್ಮಿಕರ ಬಿಕ್ಕಟ್ಟಿನ ಬಗ್ಗೆ ಉಚ್ಚ ನ್ಯಾಯಾಲಯ ಅಂತಿಮವಾಗಿ ನಿರ್ಣಾಯಕ ಮಧ್ಯಪ್ರವೇಶ ಮಾಡಿದೆ. ಆದರೆ ತುಂಬಾ ತಡವಾಯಿತು. ಉಚ್ಚ ನ್ಯಾಯಾಲಯವು ಇತ್ತೀಚೆಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ವಲಸೆ ಕಾರ್ಮಿಕರು 15 ದಿನಗಳ ಒಳಗಾಗಿ ತಮ್ಮ ತಮ್ಮ ಊರುಗಳಿಗೆ ತಲುಪುವ ವ್ಯವಸ್ಥೆ ಮಾಡುವಂತೆ ನಿರ್ದೇಶನ ನೀಡಿತ್ತು.

ಸುಪ್ರೀಂ ಕೋರ್ಟಿನ ಆದೇಶಗಳು ಈ ಕೆಳಗಿನಂತಿವೆ:

ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ತಮ್ಮ ರಾಜ್ಯಗಳಲ್ಲಿ ಸಿಲುಕಿರುವ ವಲಸೆ ಕಾರ್ಮಿಕರನ್ನು ಗುರುತಿಸಿ, ತಮ್ಮ ತಮ್ಮ ಊರುಗಳಿಹಗೆ ಹೋಗಲು ಇಚ್ಛಿಸುವವರನ್ನು 15 ದಿನಗಳ ಒಳಗಾಗಿ ಸೂಕ್ತ ಕ್ರಮ ಕೈಗೊಂಡು ಸಾರಿಗೆ ವ್ಯವಸ್ಥೆಗಳನ್ನು ಕಲ್ಪಿಸಿ ಕೊಡುವುದು. ವಲಸೆ ಕಾರ್ಮಿಕರನ್ನು ಗುರುತಿಸಿ, ನೋಂದಣಿ ಪ್ರಕ್ರಿಯೆ ವಿಕೇಂದ್ರಿಕರಿಸಿ , ಸಾರಿಗೆಗೆ ಸಂಬಂಧಿಸಿದ ಮಾಹಿತಿಯನ್ನು ಸಮೂಹ ಮಾಧ್ಯಮಗಳ ಮೂಲಕ ಪ್ರಸಾರ ಮಾಡಬೇಕು.

ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಬೇಡಿಕೆಯ ಮೇರೆಗೆ ಆರಂಭಿಸಿದ 171 ಶ್ರಮಿಕ ರೈಲುಗಳ ವ್ಯವಸ್ಥೆಯಲ್ಲದೆ ಹೆಚ್ಚಿನ ಶ್ರಮಿಕ ರೈಲುಗಳನ್ನು ಅವರವರ ಬೇಡಿಗೆ ಅನುಗುಣವಾಗಿ 24 ಗಂಟೆಯ ಒಳಗೆ ಒದಗಿಸುವುದು.

ಕೇಂದ್ರ ಮತ್ತು ರಾಜ್ಯ ಸರಕಾರಗಳು , ತಮ್ಮ ಊರುಗಳಿಗೆ ಮರಳಿದ ವಲಸೆ ಕಾರ್ಮಿಕರಿಗೆ ಸ್ಥಳೀಯವಾಗಿ ಲಭ್ಯವಿರುವ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಎಲ್ಲಾ ಉದ್ಯೋಗ ಯೋಜನಗಳೆ ವಿವರಗಳನ್ನು ನೀಡುವ ಅಫಿಡವಿಟ್ ಗಳನ್ನು ಸಲ್ಲಿಸಬೇಕು.

ಲಭ್ಯವಿರುವ ಉದ್ಯೋಗಗಳಿಗೆ ಸಂಬಂಧಿಸಿದಂತೆ ವಲಸೆ ಕಾರ್ಮಿಕರಿಗೆ ಮಾಹಿತಿ ಹಾಗೂ ಸಲಹೆ ನೀಡಲು ರಾಜ್ಯಗಳು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಮಾಲೋಚನಾ ಕೇಂದ್ರಗಳನ್ನು ಸ್ಥಾಪಿಸುವುದು. ತಮ್ಮ ಹಿಂದಿನ ಉದ್ಯೋಗದ ಸ್ಥಳಗಳಿಗೆ ಹಿಂದಿರುಗುವ ಕಾರ್ಮಿಕರಿಗೆ ಈ ಕೇಂದ್ರಗಳು ನೆರವು ನೀಡುವಂತೆ ಮಾಡುವುದು.

ವಲಸೆ ಕಾರ್ಮಿಕರಿಗೆ ಅನ್ವಯವಾಗುವ ಯಾವುದೇ ಸರಕಾರಿ ಯೋಜನೆಗಳ ಪ್ರಯೋಜನ ಪಡೆಯಲು ತಮ್ಮ ಊರು ತಲುಪಿದ ವಲಸೆ ಕಾರ್ಮಿಕರ ವಿವರಗಳನ್ನು ಗ್ರಾಮ, ತಾಲೂಕು, ಮತ್ತು ಜಿಲ್ಲಾ ಆಡಳಿತ ನಿರ್ವಹಿಸಬೇಕು. ಆಯಾ ರಾಜ್ಯಗಳು, ತಮ್ಮ ರಾಜ್ಯಗಳಿಗೆ ಮರಳಿದ ವಲಸೆ ಕಾರ್ಮಿಕರ ಸಂಖ್ಯೆ, ತಮ್ಮ ಹಿಂದಿನ ಉದ್ಯೋಗ, ಕೌಶಲ ಮತ್ತು ಅವರಿಗೆ ಲಭ್ಯವಿರುವ ಹೆಚ್ಚಿನ ಅವಕಾಶಗಳ ವಿವರಗಳನ್ನು ನೀಡುವ ಅಫಿಡವಿಟ್ ಸಲ್ಲಿಸಬೇಕು.

ವಿಪತ್ತು ನಿರ್ವಹಣಾ ಕಾಯ್ದೆಯ ಸೆಕ್ಷನ್ 51 ರ ಅಡಿಯಲ್ಲಿ ಅಥವಾ ಇತರ ಸಂಬಂಧಿತ ನಿಬಂಧನೆಗಳ ಪ್ರಕಾರ ಲಾಕ್‌ಡೌನ್ ಉಲ್ಲಂಘಿಸಿದ್ದಕ್ಕಾಗಿ ವಲಸೆ ಕಾರ್ಮಿಕರ ಮೇಲೆ ವಿಧಿಸಲಾದ ಎಲ್ಲಾ ಕ್ರಿಮಿನಲ್ ದೂರುಗಳನ್ನು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಹಿಂತೆಗೆದುಕೊಳ್ಳುವುದು.

**ಮೇಲ್ಕಂಡ ಕ್ರಮಗಳು ಮಹತ್ತರ ಪರಿಹಾರವನ್ನು ಹೊಂದಿದೆ ಎಂಬುದನ್ನು ಪ್ರಶಂಸಿಸುತ್ತಾ, ಈ ಆದೇಶಗಳು ಎತ್ತಿರುವ ಉಳಿದ ಪ್ರಶ್ನೆಗಳನ್ನು ಎತ್ತುವುದು ಅತಿ ಮುಖ್ಯ**

ವಲಸೆ ಕಾರ್ಮಿಕರನ್ನು ಗುರುತಿಸುವ ಹಾಗೂ ನೋಂದಾಯಿಸುವ ಪ್ರಕ್ರಿಯೆಗೆ ಯಾವುದೇ ಜವಾಬ್ದಾರಿಯುತ ವ್ಯವಸ್ಥೆ ಇಲ್ಲ. ಘನ ನ್ಯಾಯಾಲಯವು ನೋಂದಣಿ ಪ್ರಕ್ರಿಯೆಯ ಸರಳೀಕರಣಕ್ಕೆ ಆದೇಶಿಸಿತ್ತು. ಅದರಂತೆ ಹತ್ತಿರದ ಪೋಲೀಸ್ ಸ್ಟೇಶನ್ ಅಥವಾ ಸ್ಥಳೀಯ ಆಡಳಿತ ಕಾರ್ಮಿಕರ ನೋಂದಣಿಗೆ ಅನುವು ಮಾಡಿಕೊಟ್ಟಾಗ, ಕಾರ್ಮಿಕರಿಗೆ ಯಾವುದೇ ತೊಂದರೆಯಾಗದೆ ಸುಲಲಿತವಾಗಿ ನಡೆಯಬೇಕಾದರೆ ಪೋಲೀಸರನ್ನು ಸಂವೇದನಾಶೀಲರನ್ನಾಗಿ ಮಾಡುವಲ್ಲಿ ಹೆಚ್ಚಿನ ಗಮನಹರಿಸಬೇಕು. ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತ್ ಮಟ್ಟದ ಸಮಿತಿಗಳು, ಕೌನ್ಸಿಲರಗಳು, ಶಾಸಕರು ಇವರೆಲ್ಲಾ ಕಾರ್ಮಿಕರಿಗೆ ಸಕ್ರಿಯ ನೆರವು ನೀಡುವುದು. ನೋಂದಣಿ ಅರ್ಜಿಯ ನಮೂನೆಗಳು ಕಾರ್ಮಿಕರಿಗೆ ತಿಳಿದಿರುವ ಭಾಷಾ ಮಾಧ್ಯಮದಲ್ಲಿ ಇರಬೇಕು. ಉದ್ಯೋಗ ಅವಕಾಶಗಳನ್ನು ಪ್ರಚಾರ ಮಾಡಲು ಸ್ಥಳೀಯ ಮಾಧ್ಯಮಗಳು, ಜಾಹಿರಾತು ಫಲಕಗಳು, ರೇಡಿಯೋ ಮತ್ತಿತರ ಮಾಧ್ಯಮಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಂತೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳನ್ನು ಒತ್ತಾಯಿಸಬೇಕು.

ವಲಸೆ ಕಾರ್ಮಿಕರ ನೋದಣಿಯ ನಂತರ ಅವರ ದತ್ತಾಂಶಗಳ ಗೌಪ್ಯತೆಯನ್ನು ರಕ್ಷಿಸುವದು ಬಹಳ ಅಗತ್ಯ. ಇವರ ದತ್ತಾಂಶಗಳ ಗೌಪ್ಯತೆಗಾಗಿ ಯಾವ್ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು, ಯಾವ ರೀತಿ ಮೇಲ್ವಿಚಾರಣೆ ನಡೆಸಲಾಗುವುದು ಎಂದು ಸ್ಪಷ್ಟಗೊಳಿಸಬೇಕು. ಲಕ್ಷಾಂತರ ವಲಸೆ ಕಾರ್ಮಿಕರ ಶೋಷಣೆಯನ್ನು ಈ ಮೂಲಕ ತಪ್ಪಿಸಬೇಕು. ಅನೇಕರು ಈಗಾಗಲೇ ಆಧಾರ್ ನಿಂದಾಗಿ ಇದೇ ರೀತಿಯ ತೊಂದರೆ ಅನುಭವಿಸಿದ್ದಾರೆ.

ಶ್ರಮಿಕ ರೈಲುಗಳಲ್ಲಿ ವಲಸೆ ಕಾರ್ಮಿಕರಿಗೆ ಆಹಾರ ಮತ್ತು ನೀರು ಒದಗಿಸಿವೆ ಎಂದು ಕೇಂದ್ರ ಸರಕಾರ ಸಲ್ಲಿಸಿದ ಪ್ರಮಾಣ ಪತ್ರಗಳನ್ನು ಸುಪ್ರೀಂ ಕೋರ್ಟ್ ಪರಿಗಣಿಸಿದೆ.ಆದರೆ ವಾಸ್ತವ ಹಾಗಿರಲಿಲ್ಲ. ಶುಚಿತ್ವದ ಕೊರತೆ, ಮೂಲಭೂತ ಸೌಕರ್ಯದ ಕೊರತೆ ಮತ್ತು ಆಹಾರದ ಅಲಭ್ಯತೆ ಇದೆ ಎಂದು ಹಲವಾರು ವರದಿಗಳು ಎತ್ತಿ ತೋರಿಸಿವೆ. ಒಂದೇ ದಿನದಲ್ಲಿ 9 ಕಾರ್ಮಿಕರ ಸಾವು ಸೇರಿದಂತೆ ರೈಲುಗಳಲ್ಲಿ ಅನೇಕ ಸಾವುಗಳು ನಡೆದ ವರದಿಗಳಿವೆ. ಬೇಡಿಕೆಗೆ ತಕ್ಕಂತೆ ಹೆಚ್ಚಿನ ರೈಲುಗಳನ್ನು ಪೂರೈಸಬೇಕೆಂದು ಕೇಂದ್ರಕ್ಕೆ ಉಚ್ಛ ನ್ಯಾಯಾಲಯ ನಿರ್ದೇಶಿಸಿದೆ. ಆ ರೈಲುಗಳಲ್ಲಿ ಮೂಲಭೂತ ಸೌಕರ್ಯಗಳಿರಬೇಕು ಎಂಬುದೂ ಗಮನದಲ್ಲಿರಬೇಕು.

ಬಿಹಾರ, ಉತ್ತರ ಪ್ರದೇಶ ಹಾಗು ಇತರ ರಾಜ್ಯ ಸರಕಾರಗಳು ರೂ.1,000 ವನ್ನು ನೀಡುವುದಾಗಿ ತಿಳಿಸಿವೆ. ಆದರೆ ಈ ಮೊತ್ತ ಅವರಿಗೆ ಸಾಕಾಗದು. ವಕೀಲೆ ಇಂದಿರಾ ಜೈಸಿಂಗ್ ಅವರ ಸಲಹೆಯಂತೆ ಪ್ರತಿ ವಲಸೆ ಕಾರ್ಮಿಕರಿಗೆ ರೂ.7,500 ಗಳನ್ನು ಕೊಡುವುದು ಹೆಚ್ಚು ಅನುಕೂಲ ಮತ್ತು ಅವಶ್ಯ

ಕೂಡಾ. ನ್ಯಾಯಾಲಯವು ಮಧ್ಯಂತರ ಆದೇಶದಲ್ಲಿ ಕಾಣಿಸಿದ ಪರಿಹಾರದ ಜೊತೆಗೆ ನಗದು ಪರಿಹಾರಗಳನ್ನು ಒದಗಿಸಿ ಬೆಂಬಲಿಸುವುದೂ ಅಷ್ಟೇ ಮುಖ್ಯ.

ಶ್ರಮಿಕ ರೈಲುಗಳು ಉಚಿತ ಅನ್ನುವುದಕ್ಕೆ ಯಾವುದೇ ಪುರಾವೆಗಳಿಲ್ಲ. ಕಾರ್ಮಿಕರಿಂದ ರೈಲು ಟಿಕೆಟಿನ ಹಣ ಪಡೆದಿರುವುದನ್ನು ಸಾಕಷ್ಟು ವರದಿಗಳು ಪುಷ್ಟೀಕರಿಸುತ್ತವೆ. ಘನ ನ್ಯಾಯಲಯ ಈ ವಿಷಯವನ್ನು ಗಮನಿಸಬೇಕು. ಎಲ್ಲಾ ರೈಲುಗಳೂ ಮುಂದಿನ ದಿನಗಳಲ್ಲಿ ಕಾರ್ಮಿಕರಿಗೆ ಉಚಿತವಾಗಿ ರೈಲಿನ ಪ್ರಯಾಣದ ವ್ಯವಸ್ಥೆ ಮಾಡಬೇಕು.

ಪ್ರತಿ ರಾಜ್ಯ ಅಥವಾ ಜಿಲ್ಲಾಡಳಿತ ಪ್ರದೇಶಗಳಿಗೆ ಕಾರ್ಮಿಕ ಸಹಾಯವಾಣಿಗಳನ್ನು ಸ್ಥಾಪಿಸಲು ಮತ್ತು ಗುರುತಿಸುವ ಪ್ರಕ್ರಿಯೆಯ ವಿಕೇಂದ್ರಿಕರಣಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ದೇಶನ ನೀಡಬೇಕು. ಹಳ್ಳಿಯಿಂದ ಜಿಲ್ಲೆಗೆ, ಜಿಲ್ಲೆಯಿಂದ ಕೇಂದ್ರಕ್ಕೆ ಪ್ರತಿ ಹಂತದಲ್ಲಿ ಹೊಣೆಗಾರಿಕೆಗಾಗಿ ಕೆಲವು ಕಾರ್ಯ ಯೋಜನೆ ಕೈಗೊಳ್ಳಬೇಕು.

ಅನೇಕ ಕಾರ್ಮಿಕರು ತಮ್ಮ ಹಿಂದಿನ ಉದ್ಯೋಗದ ಸ್ಥಳಗಳಲ್ಲಿ ಮತ್ತೆ ಸೇರಿದ್ದಾರೆ ಎಂದು ರಾಜ್ಯ ಸರಕಾರಗಳ ಹೇಳಿಕೆಗಳ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ತನಿಖೆ ನಡೆಸಲು ಉಚ್ಚ ನ್ಯಾಯಾಲಯ ವಿಫಲವಾಗಿದೆ. ಮನೆಗೆ ಅಥವಾ ಊರಿಗೆ ವಾಪಾಸು ಕಳುಹಿಸಲಾದ ಕಾರ್ಮಿಕರ ಸಂಖ್ಯೆಯ ಅಂಕಿಅಂಶಗಳನ್ನು ಒದಗಿಸುವಾಗ ರಾಜ್ಯಗಳಲ್ಲೇ ಉಳಿದುಕೊಂಡಿರುವ ಅಥವಾ ಮತ್ತೆ ಸೇರಿಕೊಂಡಿರುವ ಕಾರ್ಮಿಕರ ನೈಜ ಅಂಕಿಅಂಶಗಳ ಮೌಲ್ಯ ಮಾಪನ ಮಾಡಿಲ್ಲ. ಮುಂದಿನ ದಿನಗಳಲ್ಲಿ ಒಳ್ಳೆಯ ವ್ಯವಸ್ಥೆಗಾಗಿ ಮೌಲ್ಯಮಾಪನ ಮತ್ತು ದಾಖಲೀಕರಣ ಅತೀ ಅವಶ್ಯ.

ನ್ಯಾಯಾಲಯದ ಆದೇಶವು ಪ್ರತಿ ರಾಜ್ಯದ ದತ್ತಾಂಶ ಮತ್ತು ಅಂಕಿಅಂಶಗಳ ಕ್ರೂಢೀಕರಣದ ಪ್ರಕ್ರಿಯೆಯ ಬಗ್ಗೆ ಉಲ್ಲೇಖಿಸಿಲ್ಲ. ಆದ್ದರಿಂದ ತಮ್ಮ ಊರಿಗೆ ತೆರಳಿದ ಕಾರ್ಮಿಕರ ಸಂಖ್ಯೆ ಬಗ್ಗೆ ಸಂಪೂರ್ಣವಾಗಿ ಪರಿಶೀಲಿಸಬೇಕಾದ ಅಗತ್ಯವಿದೆ.

**ಈ ಆದೇಶಗಳ ಅನುಷ್ಟಾನದ ಮೇಲೆ ನಾವು ನಿಗಾ ಇಡುತ್ತೇವೆ ಮತ್ತು ಕಾಲಕಾಲಕ್ಕೆ ಕೋರ್ಟಿಗೆ ವರದಿ ಸಲ್ಲಿಸುತ್ತೇವೆ.**